ಜಿಲೇಬಿ, ರಬಡಿ, ಹಲ್ವಾ, ಪನೀರ ಸಬ್ಜಿಗೊಳ್ನೆಲ್ಲಾ ಮಸ್ತಾಗಿ ಮಾಡ್ತೇನಿ. ಹಂಗ ಹೋಳಿಗಿ, ಹಯಗ್ರೀವ, ಬಿಸಿಬೇಳೆಭಾತು, ಬೋಂಡಾ ಮಾಡ್ತೇನಿ. ಬೇಕಾದಷ್ಟು ಫಳಿಸೇನಿ. ಕಾಶಿವಳಗ ಒಂದು, ಸ್ವಾದಿವಳಗ ಒಂದು ಮನಿ ತೊಗೊಂಡೇನಿ. ಹೆಂಡ್ತಿ ಕಾಶಿಯಾಕಿ... ಹಿಂದಿ ಹುಡುಗಿ. ಛೊಲೊ ಇದ್ದಾಳ. ಮಗಾ ಪಬ್ಲಿಕ್ ಸ್ಕೂಲ್‌ನ್ಯಾಗ ಓದ್ತಾನ. ಒಟ್ಟಿನ್ಯಾಗ ಆರಾಮ ಇದ್ದೇನಿ ನೋಡಪಾ' ಎಂದು ಮಾತು ನಿಲ್ಲಿಸಿದ.

ನನ್ನೆದೆಯಲ್ಲಿ ವಿಚಿತ್ರ ಭಾವನೆಗಳ ಕಲಸು ಮೇಲೋಗರ. ಸತ್ತನೆಂದುಕೊಂಡ ಚಡ್ಡಿದೋಸ್ತ ಬದುಕಿದ್ದ ಸಂತೋಷ ಒಂದೆಡೆಯಾದರೆ ಅವನ ಕಥೆ ಕೇಳಿ ವಿಷಾದ ಕಾಡುತ್ತಿತ್ತು. 'ಅಲ್ಲೋ ಅಚ್ಚ್ಯಾ... ನನ್ನ ನೆನಪ ಬರಲಿಲ್ಲೇನು ನಿನಗ? ಇದನ್ನೆಲ್ಲಾ ನನ್ನ ಮುಂದ ಹೇಳಬೇಕು ಅನಸ್ಲಿಲ್ಲಾ? ನಾವಿಬ್ಬರೂ ಕೂಡಿ ಏನಾರ ಪರಿಹಾರ ಹುಡುಕತಿದ್ವಿ' ಎಂದೆ. ಅವನು ಸಣ್ಣಗೆ ನಗುತ್ತ, 'ಏನ ಪರಿಹಾರ ಹುಡುಕತಿದ್ದಿ? ನೀ ಇನ್ನೂ ಕಲೀಲಿಕತ್ತಿದ್ದಿ. ಅಲ್ಲದ ನನಗ... ವೈನಿ ಮಾಡಿದ ಮರ್ಯಾದಿಗೇಡಿ ಕೆಲಸ ಯಾರಿಗೂ ತಿಳಿಯೋದು ಬ್ಯಾಡಾಗಿತ್ತು. ಮನಿತನದ ಮರ್ಯಾದಿ ಪ್ರಶ್ನೆ. ಇಷ್ಟು ದಿವ್ಸ ಛೊಲೊತ್ನಾಂಗ ಬಾಳಿ ಬದುಕಿದ ಮನಿ. ಹೆಂಗರ ಆರಾಮಾಗಿ ಇದ್ದರ ಸಾಕು ಅನಸ್ತಿತ್ತು. ವೈನಿಗೆ ಹುಟ್ಟಿದ ಎರಡೂ ಮಕ್ಕಳೂ ನಮ್ಮಣ್ಣನ್ನು ಅಲ್ಲ. ಖರೆ ಆ ಹುಡುಗುರದು ಏನ ತಪ್ಪು? ಅಲ್ಲದ ವೈನಿ ಕೈ ಭಾಳ ಉದ್ದ ಅವಪಾ. ಅಕಿ ಅಣ್ಣ ಇದ್ದಾನಲಾ... ಅಂವಂದ ಎಲ್ಲಾ ಮಸಲತ್ತು. ನಾ ಇಲ್ಲದ್ದು ಅವರಿಗಿನ್ನೂ ಸಲೀಸಾತು. ತೂಕಡಸಾವ್ರಿಗೆ ಹಾಸಿಗಿ ಹಾಸಿ ಕೊಟ್ಟಂಗಾತು. ಅವ್ವಗ ಆಘಾತಾಗಿ ಆಕಾಶ ನೋಡಕೋತ ಕೂತು ಬಿಡ್ತಿದ್ಲು. ಇಲ್ಲಾಂದ್ರ ಸ್ವಾದಿಗೆ ಹೋಗಿಬಿಡ್ತಿದ್ಲು. ವೈನಿ ತವರಮನಿಗೆ ಎಷ್ಟು ಬಂಗಾರ, ರೊಕ್ಕ ಎಷ್ಟು ಸಾಗಿಸಿದ್ಲೋ ಏನೊ? ಏನೂ ಇಲ್ಲದಾಂವಾ ಅವರಣ್ಣಾ ಮನಿ ಕಟಗೊಂಡು ಆರಾಮ ಇದ್ದಾನ. ದೊಡ್ಡ ವೈನಿನ್ನ ಅವರ ಅಣ್ಣಂದ್ರು ಕಳಸ್ಲೇ ಇಲ್ಲ. ಆಸ್ತಿವಳಗ ಪಾಲೂ ಬ್ಯಾಡಂದು ಬಿಟ್ರು. ಅದು ಇವರಿಗೆ ಇನ್ನೂ ಛೊಲೊ ಆತು. ಒಟ್ಟಿನ್ಯಾಗ ಸುಶೀಲಾ ವೈನಿ ನಮ್ಮನಿ ಹಾಳು ಮಾಡಿದ್ಲು. ಮೋಹನಣ್ಣ ಅಕಿ ಕೈಯಾಗಿನ ಗೊಂಬಿ ಆದ. ತುಂಬಿದ ಸಂಸಾರ ಛಿದ್ರ ಆಗಿ ಮೂರಾಬಟ್ಟಿ ಆಗಿಹೋತು. ಇಷ್ಟೆಲ್ಲಾ ಕಥಿ ಆತು ನೋಡು...' ಎಂದು ನಿಟ್ಟುಸಿರು ಬಿಟ್ಟ.

'ಈಗೆಲ್ಲಾ ಆರಾಮದಲಾ ಅಚ್ಚ್ಯಾ... ಊರಿಗೆ ಬಂದು ಝಗಳ್ಯಾಡಿ ನಿನ್ನ ಪಾಲಿನ ಆಸ್ತಿ ತೊಗೊಬಾರದ? ಇನ್ನೂ ಆರಾಮ ಇರಬಹುದು' ಎಂದೆ. ಮತ್ತೆ ವ್ಯಂಗ್ಯವಾಗಿ ನಕ್ಕವ, 'ಊರಿಗೆ ಬಂದು ಆಸ್ತಿ ಕೇಳೋದು ದೊಡ್ಡ ಮಾತಲ್ಲ. ಖರೆ ಅವರ ಮಾರಿ ದಿನಾ ನೋಡಕೋತ ಇರೋದು ಅಂದ್ರ ಶಿಕ್ಷಾ ಇದ್ಧಂಗ. ಅವರೇನು ಉಲ್ಟಾ ಹೊಡದು ನನ್ನ ಮ್ಯಾಲೆ ಅಪವಾದ ಕೊಟ್ಟರೂ ಕೊಟ್ಟರ. ಮಂದಿ ನಂಬತಾರ. ಅವರಿಗೆ ಆ ಶ್ಯಾಣ್ಯಾತನಾ ಅದ. ಮನಿ ಮರ್ಯಾದಿ ಹೋಗತದ. ಅಲ್ಲದ ಆ ಹುಡುಗುರು ಏನ ಪಾಪಾ ಮಾಡ್ಯಾವ? ಆರಾಮ ಇರ್ಲಿ ಬಿಡು. ನಾ ಇಲ್ಲೆ ಆರಾಮಿದ್ದೇನಿ' ಎಂದು ವಿಷಾದಭರಿತ ನಗೆ ನಕ್ಕ. 'ಬರೇ ನಂದ ಪುರಾಣ ಆತು. ನಿನ್ನ ಬಗ್ಗೆ ಹೇಳು. ಹೆಂಗಿದ್ದಿ? ಏನ ಮಾಡ್ಲಿಕತ್ತಿ? ಗೋದಕ್ಕ ಕಾಕು ಹೆಂಗಿದ್ದಾರ? ಅಕ್ಕಂದ್ರು... ಅಣ್ಣ... ನಿನ್ನ ಹೆಂಡ್ತಿ, ಮಕ್ಕಳು...' ಎಂದು ಪ್ರಶ್ನೆಗಳ ಸುರಿಮಳೆ ತಡೆಯುತ್ತ ನನ್ನ ಪ್ರವರ ಹೇಳಿದೆ. ಕೊನೆಗೆ 'ಇವತ್ತ ನಿಮ್ಮಣ್ಣ, ವೈನಿ ಭೆಟ್ಟ್ಯಾಗಿದ್ರು. ನಿಮ್ಮ ತಂದಿ, ಕಷ್ಣಣ್ಣಂದು ಶ್ರಾದ್ಧ ಮಾಡಿದ್ರು. ಹಂಗ ನಿ... ನಿಂದೂ ಮಾಡಿದ್ರು' ಎಂದು ಹೇಳುವಾಗ ಕಷ್ಟವಾಗಿ ನಾಲಿಗೆ ತಡವರಿಸಿತು. ಉಗುಳು ನುಂಗಿದೆ. ಕಿಸಕ್ಕನೆ ನಕ್ಕನವ, 'ವರದಾಚರ್‍ರ ಮನ್ಯಾಗ ಹೌದಲ್ಲೋ? ಅದಕ್ಕ ಅಡಗಿ ನಾನ ಮಾಡಿದ್ದೆ. ಶ್ರೀಖಂಡ, ಪುರಿ, ಹುಳಿ, ಉದ್ದಿನ ವಡಿ... ಅಂದ್ರ ನನ್ನ ಶ್ರಾದ್ಧಕ್ಕ ನಾನ ಅಡಗಿ ಮಾಡಿದ್ಯಾ ಅಂದಂಗಾತು...' ಎಂದು ನಕ್ಕರೂ ಕಣ್ಣಂಚಿನಲ್ಲಿ ನೀರಿನ ಪಸೆ ಇತ್ತು.

ನಸುಗತ್ತಲಾವರಿಸುತ್ತಿತ್ತು. ದೂರದಲ್ಲಿ ಗಂಗಾ ಆರತಿಗೆ ಘಾಟ್‌ಗಳು ಸಿದ್ಧವಾಗುತ್ತಿದ್ದವು. 'ಎಲ್ಲಾ ಹೇಳಿದಿ ಅಚ್ಚ್ಯಾ, ಖರೆ ನಿಮ್ಮವ್ವ ಪದ್ದಕ್ಕ ಕಾಕೂನ ಬಗ್ಗೆ ವಿಚಾರ ಮಾಡ್ಲಿಲ್ಲಲಾ? ಹಿರೇ ಜೀವ. ನಿನ್ನ ಸಲವಾಗಿ ಎಷ್ಟು ಕಾಯ್ತಾಳ? ನೀ ಬಂದರ ಕರಕೊಂಡು ಬಾ ಅಂತ ನನಗ ಹೇಳಿದ್ಲು. ಪಾಪ... ಮಗನ್ನ ಕಾಣದನ ಎಷ್ಟು ತ್ರಾಸಾಗಿರಬಹುದು ಆಕಿಗೆ? ಇವತ್ತ ನಿನ್ನ ಶ್ರಾದ್ಧ ಮಾಡಬ್ಯಾಡ್ರಿ ಅಂತ ಹೇಳಿ ಕಳಿಸಿದ್ಲಂತ. ಅಕಿಗರೆ ನೀ ಬದಕಿದ್ದ ವಿಚಾರ ತಿಳಸು. ಹೆಂಡ್ತಿ, ಮಕ್ಕಳ ಬಗ್ಗೆ ಹೇಳು. ತಾಯಿ ಜೀವ ಖುಷಿ ಪಡ್ತದ' ಎನ್ನುತ್ತ ಅವನ ಹೆಗಲ ಮೇಲೆ ಕೈ ಇಟ್ಟೆ. ನನ್ನ ಮುಖ ನೋಡಿ ನಕ್ಕವ 'ಖರೇ ಹೇಳಬೇಕಂದ್ರ ಇದೆಲ್ಲಾ ನಡದದ್ದು ಅವ್ವ ಹೇಳಿಧಾಂಗ. ನಮ್ಮಪ್ಪಗ ಲಕ್ವಾ ಹೊಡದ ಮ್ಯಾಲೆ ಅವ್ವ